ಬಾಗೆಪಲ್ಲಿಯಲ್ಲಿ ಬಸ್ಸು ನಿಲ್ದಾಣವನ್ನು ನಿರ್ಮಿಸುವುದು

೧೯೮೭. ಶ್ರೀ ಬಿ. ನಾರಾಯಣ ಸ್ವಾಮಿ (ಬಾಗೇಪಲ್ಲಿ). - ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಒಂದು ಸರಕಾರಿ ವಾಹನ ನಿಲ್ದಾಣ ಸ್ಥಾಪಿಸುವ ವಿಚಾರ ವೇನಾದರೂ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಈಗಾಗಲೇ ಕೈಗೊಂಡಿರುವ ಕ್ರಮಗಳೇನು? ಹಾಗೂ ಕೈಗೊಳ್ಳುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ) ಇದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಬಾಗೇಪಲ್ಲಿಯಲ್ಲಿ ಸೂಕ್ತವಾದ ನಿವೇಶನ ದೊರೆತ ನಂತರ ಕ್ರಮ ಕೈಗೊಳ್ಳಲಾಗುವುದು.

ಬೇಲೂರು ಪಟ್ಟಣಕ್ಕೆ ನೀರು ಸರಬರಾಜು ಬಗ್ಗೆ

೧೯೮೬. ಶ್ರೀ ಹೆಚ್ ಕೆ ಕುಮಾರ್ ಸ್ವಾಮಿ (ಬೇಲೂರು). —ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇಲೂರು ಪಟ್ಟಣದಲ್ಲಿ ನೀರಿಗೆ ತುಂಬಾ ತೊಂದರೆ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ನೀರು ಸರಬರಾಜಿಗಾಗಿ ೧೮ ಲಕ್ಷ ರೂಪಾಯಿ ಯೋಜನೆ ಮತ್ತು ಅಂದಾಜು ಮಾಡಿರುವುದು ನಿಜವೇ?

ಇ) ೧೯೮೬-೮೭ನೇ ಸಾಲಿನಲ್ಲಿ ಯೋಜನೆ ಮತ್ತು ಅಂದಾಜಿಗೆ ಒಪ್ಪಿಗೆ ಕೊಟ್ಟ ಹಣ ಬಿಡುಗಡೆ ಮಾಡಲಾಗುವುದೇ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಸ್ವಲ್ಪ ಪ್ರಮಾಣದ ತೊಂದರೆ ಇದೆ.

ಆ) ೧೭೪೩ ಲಕ್ಷ ರೂ.ಗಳು ಅಂದಾಜು ವೆಚ್ಚದಲ್ಲಿ ೩ನೇ ಹಂತ ಅಭಿವೃದ್ಧಿ ಯೋಜನೆಯನ್ನು ತಯಾರು ಮಾಡಲಾಗಿದೆ.

ಇ) ಇಲ್ಲ.

ಕೈಗಾರಿಕಾ ರಹಿತ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ.

೧೯೮೭. ಶ್ರೀ ಬಸವರಾಜ್ ಪಾಟೀಲ್ (ಹುಮನಾಬಾದ್).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೈಗಾರಿಕಾ ರಹಿತ ಜಿಲ್ಲೆ ಎಂದು ಪರಿಗಣಿಸಿದ ಬೀದರ್ ಜಿಲ್ಲೆಯಲ್ಲಿ ಈಗ ಎಷ್ಟು ಕೈಗಾರಿಕೆಗಳು ಪ್ರಾರಂಭವಾಗಿವೆ ಹಾಗೂ ಅವು ಯಾವುವು ?

ಆ) ಅವು ಈಗ ಯಾವ ಹಂತದಲ್ಲಿವೆ ?

ಇ) ಪ್ರಾರಂಭಿಸಲಾದ ಕೈಗಾರಿಕೆಗಳಲ್ಲಿ ಕೇಂದ್ರ ಸರ್ಕಾರದಿಂದ ಪರವಾನಿಗೆ ಪಡೆದವುಗಳೆಷ್ಟು ಹಾಗೂ ರಾಜ್ಯ ಸರ್ಕಾರದವರ ಪರವಾನಿಗೆ ಹೊಂದಿದವುಗಳೆಷ್ಟು ಮತ್ತು ಅವುಗಳು ಯಾವ ಯಾವ ತಾಲ್ಲೂಕಿನಲ್ಲಿವೆ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮಂತ್ರಿ ಮಧ್ಯಮ ಕೈಗಾರಿಕಾ ಸಚಿವರು).—

ಅ) ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಒಟ್ಟು ೭

೧ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ

೨ ಇಂಪ್ಯಾಕ್ಟ್ ಟ್ಯೂಬ್ಸ್ ಲಿಮಿಟೆಡ್

೩ ಜೆಮಿನಿ ಗ್ರಾಫೈಟ್ (ಪ್ರೈವೇಟ್) ಲಿಮಿಟೆಡ್.

೪ ಬೀದರ್ ಸ್ಪೆಷಲ್ ಅಲಾಯ್ ಸ್ಟೀಲ್ಸ್ ಲಿ.

೫ ನಂದಿ ಸಿಲಿಂಡರ್ಸ್ ಪ್ರೈವೇಟ್ ಲಿಮಿಟೆಡ್

೬ ಜ್ಯೋತಿ ರೆಕ್ಸಿನ್ಸ್ ಪ್ರೈವೇಟ್ ಲಿಮಿಟೆಡ್

೭ ಕಾಸ್‌ಮಾಸ್ ವಾಚ್ ಇಂಡಸ್ಟ್ರೀಸ್.

ಆ) ೭ರಲ್ಲಿ ೪ ಕೈಗಾರಿಕೆಗಳು ಕೆಲಸವನ್ನು ಪ್ರಾರಂಭಿಸಿವೆ. ೩ ಕೈಗಾರಿಕೆಗಳು ಬೇರೆ ಬೇರೆ ಹಂತದಲ್ಲಿವೆ.

ಇ) ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಭಾರತ ಸರ್ಕಾರದಿಂದ ಪರವಾನಿಗೆಗಳನ್ನು ನೀಡಲಾಗುತ್ತಿದೆ. ಚಿಕ್ಕ ಪ್ರಮಾಣದ ಕೈಗಾರಿಕೆಗಳಿಗೆ ನೊಂದಣಿ ಪ್ರಮಾಣ ಪತ್ರಗಳನ್ನು ರಾಜ್ಯ ಸರ್ಕಾರದಿಂದ ನೀಡಲಾಗುತ್ತಿದೆ.

ತಾಲ್ಲೂಕು	ಸಣ್ಣ ಕೈಗಾರಿಕೆಗಳು	ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು
ಬೀದರ್	೩೨೯	೫
ಭಾಲಕಿ	೭೯	—
ಬಸವಕಲ್ಯಾಣ್	೭೨	—
ಹುಮ್ನಾಬಾದ್	೯೨	೨
ಔರದ್	೭೦	—

ಮಂಡ್ಯದಿಂದ ಹಳೇಬೀಡಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಓಡಿಸುವುದು.

೧೯೭೬. ಶ್ರೀ ಕೃಷ್ಣ (ಕೃಷ್ಣರಾಜ ಪೇಟೆ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡ್ಯ ಜಿಲ್ಲಾ ಕೇಂದ್ರದಿಂದ ಮೇಲುಕೋಟೆ, ಶ್ರವಣಬೆಳಗೊಳ, ಹಾಸನ, ಬೇಲೂರು, ಹಳೇಬೀಡು ಈ ಪ್ರವಾಸಿ ಕ್ಷೇತ್ರಗಳಿಗೆ ಸರಿಯಾದ ಸಾರಿಗೆ ಸಂಸ್ಥೆಯ ವಾಹನ ಸೌಲಭ್ಯ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಮಂಡ್ಯದಿಂದ ಮೇಲುಕೋಟೆ, ಸಂತೇ ಬಾಚಹಳ್ಳಿ, ಅಘಲಯ, ಶ್ರವಣಬೆಳಗೊಳ, ಚೆನ್ನರಾಯಪಟ್ಟಣ, ಹಾಸನ, ಬೇಲೂರು ಮಾರ್ಗವಾಗಿ ಹಳೇಬೀಡಿಗೆ ನೇರ ವಾಹನ ಸೌಲಭ್ಯ ಒದಗಿಸಿ ಪ್ರವಾಸಿಗಳಿಗೆ ಹಾಗೂ ಗ್ರಾಮೀಣ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಿಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಇ) ಸದರೀ ಮಾರ್ಗದಲ್ಲಿ ಸಾರಿಗೆ ಸಂಸ್ಥೆ ವಾಹನ ಓಡಿಸುವುದರಿಂದ ಸಂಸ್ಥೆಗೂ ಲಾಭವಾಗಿ ಪ್ರಯಾಣಿಕರಿಗೂ ಅನುಕೂಲವಾಗುವುದರಿಂದ ಇಲ್ಲಿ ವಾಹನ ಓಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?